ಮನುಷ್ಯನ ಅಂತರಂಗವನ್ನು ಸ್ಪರ್ಶಿಸಬಲ್ಲುದು. ಅಲ್ಲೊಂದು ಚಲನೆಯನ್ನು ಮೂಡಿಸಬಲ್ಲುದು. ನೃತ್ಯವು ದೇವರನ್ನು ತಲುಪುವುದಕ್ಕೆ ಇರುವ ಇನ್ನೊಂದು ಮಾರ್ಗವೆಂದು ಹೇಳುವುದಾದರೂ ಕೂಡ, ನಮ್ಮ ದೇವಸ್ಥಾನಗಳಲ್ಲಿ ರಾಜರ ಆಸ್ಥಾನಗಳಲ್ಲಿ ಬೆಳೆದು ಬಂದ ನೃತ್ಯದ ಉದ್ದೇಶ ಅನೇಕವಿತ್ತು. ಮನೋರಂಜನೆ, ನೀತಿ ಬೋಧನೆ, ಕೌನ್ಸೆಲಿಂಗ್... ಹೀಗೆ. ಲಲಿತಕಲೆಗಳು ಖಂಡಿತಾ ಸಾಮಾಜಿಕ ವಿಚಾರಗಳನ್ನು ಪ್ರಸ್ತುತಪಡಿಸುತ್ತವೆ. ಕೂಚಿಪುಡಿ ನೃತ್ಯ ಪರಂಪರೆಯಲ್ಲಿ ಒಂದು ಕಥೆಯಿದೆ. ಒಂದೂರಿನಲ್ಲಿ ಒಬ್ಬ ಸಜ್ಜನನಾದ ರಾಜನು ಆಡಳಿತ ಮಾಡುತ್ತಿದ್ದನಂತೆ. ಆದರೆ ಅವನ ಅಧಿಕಾರಿಗಳ ಪೈಕಿ ಒಬ್ಬನು ಪ್ರಜೆಗಳ ಜೊತೆಗೆ ಬಹಳ ಕೆಟ್ಟದಾಗಿ ನಡೆದುಕೊಳ್ಳುತ್ತಿದ್ದ. ತನ್ನ ಕೈಕೆಳಗಿನ ಸಿಬ್ಬಂದಿಯನ್ನು ಒರಟಾಗಿ ನಡೆಸಿಕೊಳ್ಳುತ್ತಿದ್ದ. ಪ್ರಜೆಗಳನ್ನು ಪೀಡಿಸುತ್ತಿದ್ದ. ಇದನ್ನು ರಾಜನ ಗಮನಕ್ಕೆ ತರಲು ಹಲವರು ಪ್ರಯತ್ನಪಟ್ಟರೂ, ಉತ್ತಮ ಮನಸ್ಸಿನ ರಾಜನಿಗೆ ವಿಷಯ ತಲುಪಿಸುವುದು ಸಾಧ್ಯವಾಗಲಿಲ್ಲ. ಆಗ ಆಸ್ಥಾನದ ನರ್ತಕಿಯರು ಈ ಕುರಿತು ಒಂದು ನೃತ್ಯಕಾರ್ಯಕ್ರಮವನ್ನು ಮಾಡಿ ಅಭಿನಯ ರೂಪದಲ್ಲಿ ಪ್ರಸ್ತುತಪಡಿಸಿದರಂತೆ. ಆಗ ರಾಜನಿಗೆ ತನ್ನ ಆಡಳಿತದಲ್ಲಿ ಪ್ರಜೆಗಳಿಗೆ ಆಗುತ್ತಿರುವ ತೊಂದರೆಯ ವಿಷಯ ತಿಳಿಯಿತಂತೆ. ಈ ಕಥೆಯು ಕಲೆಯ ಸಾಮರ್ಥ್ಯವನ್ನು ಹೇಳುತ್ತದೆ. ಲಲಿತ ಕಲಾಕ್ಷೇತ್ರವು ಸಾಮಾಜಿಕ ಆಗುಹೋಗುಗಳಿಗೆ ಕನ್ನಡಿ ಹಿಡಿಯಬಲ್ಲದು. ನಾವು ಸಮಕಾಲೀನ ಸಾಹಿತ್ಯವನ್ನು ಕೈಗೆತ್ತಿಕೊಂಡರೂ, ಇತಿಹಾಸ, ಪುರಾಣದ ಕಥೆಗಳನ್ನು ಕೈಗೆತ್ತಿಕೊಂಡರೂ, ಅವುಗಳ ಉದ್ದೇಶ ಸಮಾಜವನ್ನು ಜಾಗೃತ ಸ್ಥಿತಿಯಲ್ಲಿ ಇಡುವುದೇ ಆಗಿದೆ. ರಾಮಾಯಣ, ಮಹಾಭಾರತ ಮಹಾಕಾವ್ಯಗಳ ಕಥೆಗಳು ಕೂಡ ಸಾರ್ವಕಾಲಿಕ ಸತ್ಯವನ್ನೇ ಪ್ರತಿಪಾದಿಸುತ್ತವೆ. ಮನುಷ್ಯನ ಬೇನೆ ಬೇಸರಗಳನ್ನೇ ಸೆರೆಹಿಡಿಯಲು ಪ್ರಯತ್ನಿಸುತ್ತವೆ. ಸರಿ-ತಪ್ಪು, ನೈತಿಕ- ಅನೈತಿಕ – ಹೀಗೆ ಸಾಮಾಜಿಕ ಮೌಲ್ಯಗಳನ್ನು ಜನರ ಮನಸ್ಸಿನಲ್ಲಿ ಗಟ್ಟಿಯಾಗಿ ನೆಲೆವೂರುವಂತೆ ಮಾಡುತ್ತದೆ.

**◆ ಅಧ್ಯಾತ್ಮಕ್ಕೆ ಕಲಾಪ್ರಕಾರಗಳು ದಾರಿ ಎನ್ನುತ್ತಾರಲ್ಲ?**

ಅಧ್ಯಾತ್ಮದ ದಾರಿಯಾಗಿ ನೃತ್ಯವು ಕಾಣಿಸಿಕೊಳ್ಳಬೇಕಾದರೆ ಅದು ಒಬ್ಬೊಬ್ಬರಿಗೆ ಒಂದೊಂದು ವಿಧವಾಗಿ ದಕ್ಕುತ್ತದೆ. ಯಾಕೆಂದರೆ, ಇದು ತೀರಾ ವೈಯಕ್ತಿಕ ಅನುಭವವಾಗಿರುತ್ತದೆ. ನನ್ನ ಅನುಭವದ ಮಾತಿನಲ್ಲಿ ಹೇಳುವುದಾದರೆ, ನೃತ್ಯದ ಮುಖೇನ ದೇವರ ಅನುಭವ ಪಡೆಯುತ್ತೇವೋ ಇಲ್ಲವೋ ಅದು ಮನುಷ್ಯನ ಒಳತೋಟಿಯನ್ನು ಸ್ಪರ್ಶಿಸಬಲ್ಲುದು. ಭಾವನೆಗಳನ್ನು ಉದ್ದೀಪಿಸಬಲ್ಲುದು. ನಿಯಂತ್ರಣ, ತರಬೇತುಗೊಳಿಸುವ ಕೆಲಸವನ್ನೂ ಮಾಡುವುದು. ನನ್ನನ್ನು ಬಹುವಾಗಿ ಕಾಡುವುದು 'ಸುಭದ್ರ ವಿಲಾಪ' ನೃತ್ಯಪ್ರಸ್ತುತಿ. ಅಭಿಮನ್ಯುವಿನ ಹೆಣದ ಮುಂದೆ ಸುಭದ್ರೆಯು ಅಳುತ್ತ ಕೃಷ್ಣನಿಗೆ ಕೇಳುವ ಪ್ರಶ್ನೆಗಳು ಎಂತಹವರ ಎದೆಯನ್ನಾದರೂ ಇರಿಯುವಂತಿವೆ. ಜಯದೇವ ಅಷ್ಟಪದಿಯ ಕೊನೆಯ ಭಾಗ, (ಇದು ಗೋಪಾಲ ತಾಪ ಉಪನಿಷತ್‌ನಿಂದ ಪ್ರೇರಿತವಾದುದು) ಕೂಡ ನನ್ನನ್ನು ಬೇರೆಯೇ ಲೋಕಕ್ಕೆ ಕೊಂಡೊಯ್ಯುತ್ತದೆ. ಹಾಗಾದರೆ ಏನಿದು 'ಬೇರೆಯೇ ಲೋಕ' ಎಂದರೆ... ಏನೋ ಒಂದು ರೀತಿಯ ಉನ್ನತ ಶಕ್ತಿಯನ್ನು ಸ್ಪರ್ಶಿಸಿ ಬಂದಂತಹ ಭಾವ. ಈ ಭಾವವು ನನ್ನಲ್ಲಿ ಅಚ್ಚರಿ, ವಿಸ್ಮಯ, ತನ್ಮಯತೆಯನ್ನು ಮೂಡಿಸುತ್ತದೆ. ಇದಕ್ಕೆ ಹೆಸರಿಡಲಾರೆ.

**◆ 20ನೇ ಶತಮಾನದಲ್ಲಿ ಭಾರತೀಯ ಸಾಂಸ್ಕೃತಿಕ ಕ್ಷೇತ್ರದಲ್ಲಿ ಆಗಿರುವ ಬದಲಾವಣೆಯಲ್ಲಿ ಭಕ್ತಿಪಂಥದ ಪ್ರಭಾವ ಗಾಢವಾದುದು. ತೆಲುಗು ನಾಡಿನ ನೃತ್ಯಪ್ರಕಾರಗಳ ಮೇಲೆಯೂ ಈ ಪ್ರಭಾವ ಗಾಢವಾಗಿದೆ. ಈ ಕುರಿತು ನಿಮ್ಮ ಅವಲೋಕನಗಳೇನು?**

ಭಕ್ತಿಪಂಥವು ನಮ್ಮ ದೇಶದ ಸಾಂಸ್ಕೃತಿಕ ಚಹರೆಯನ್ನೇ ಬದಲಿಸಿದ ಒಂದು ಮಹಾನ್ ಚಳವಳಿ. ಸಾಹಿತ್ಯ, ಸಂಗೀತ, ಕಲಾಕ್ಷೇತ್ರದಲ್ಲಿ ಗಣನೀಯ ಬದಲಾವಣೆಯನ್ನು ತಂದಿರುವ ಚಳವಳಿ. ಈ ನೆಲದಲ್ಲಿ ಪ್ರಸಿದ್ಧ ಸಂತರು, ತತ್ವಜ್ಞಾನಿಗಳು ಭಕ್ತಿಪಂಥದ ಸಂದರ್ಭದಲ್ಲಿ ಮುನ್ನೆಲೆಗೆ ಬಂದರು. ಭಾರತೀಯ ತತ್ವಜ್ಞಾನ ಕ್ಷೇತ್ರವು ಇಂತಹ ಚಿಂತಕರ ಆಲೋಚನಾ ಕ್ರಮಗಳಿಂದ ಪ್ರಭಾವಕ್ಕೊಳಗಾಗಿದ್ದಲ್ಲದೆ, ಪುರಾಣ, ಕಾವ್ಯಗಳ ಗ್ರಹಿಕೆಗೆ ಹೊಸ ಆಯಾಮವನ್ನು ಕೊಟ್ಟವು. ಅಧ್ಯಾತ್ಮ, ಧಾರ್ಮಿಕತೆ ಮತ್ತು ಭಕ್ತಿಯು ಹೊಸ ಆಲೋಚನೆ, ನಂಬಿಕೆ ಮತ್ತು ಜ್ಞಾನದ ಶಾಖೆಗಳನ್ನು ತೆರೆದಿದೆ. ವೈಷ್ಣವ ಪಂಥವನ್ನು ಅನುಸರಿಸಿದ ಪ್ರಸಿದ್ಧ